ತೆಲುಗಿನ ಪ್ರಸಿದ್ಧ ಕಥೆಗಾರ್ತಿ, ಕವಯಿತ್ರಿ ಕಲ್ಪನಾ ರೆಂಟಾಲ ಸಾಹಿತ್ಯ ವಿಮರ್ಶಕಿಯೂ ಹೌದು. ಅಭ್ಯುದಯ ಕವಿ ಹಾಗೂ ಪತ್ರಕರ್ತರಾದ ರೆಂಟಾಲ ಗೋಪಾಲಕೃಷ್ಣ ಅವರ ಪುತ್ರಿ. ವಿಜಯವಾಡ ಹುಟ್ಟೂರು. ಅವರ ಬರಹಗಳು ಸಹೃದಯರ ಗಮನ ಸೆಳೆಯುವಂತಿವೆ. 'ನೇನು ಕನಿಪಿಂಚೇ ಪದಂ' ಕವನ ಸಂಕಲನಕ್ಕೆ ಅಜಂತಾ ಪ್ರಶಸ್ತಿ ದೊರೆತಿದೆ. 'ತನ್ಹಾಯಿ' ಕಾದಂಬರಿಯು ಮಲಯಾಳಕ್ಕೆ ಅನುವಾದಗೊಂಡಿದೆ. 'ಅಯಿದೋ ಗೋಡ' ಮತ್ತೊಂದು ಕಥಾಸಂಕಲನ.

ದೀರ್ಘವಾಗಿ ಯೋಚಿಸುತ್ತಿದ್ದಾಳೆ ಶ್ರಿಯಾ. ಸ್ಪಾಟಿಫೈ ಆ್ಯಪ್ ನಿಂದ ಶ್ರಿಯಾಳಿಗೆ ಇಷ್ಟವಾದ ಪ್ಲೇಲಿಸ್ಟ್ ಸಣ್ಣದಾಗಿ ಕೇಳಿಸುತ್ತಿದೆ.

'ಏನಮ್ಮಾ, ನೋವು ಕಡಿಮೆಯಾಗಲಿಲ್ಲವೇ? ಡಾಕ್ಟರ್ ಹತ್ತಿರ ಹೋಗೋಣವೇ?' ಪಕ್ಕದಲ್ಲೇ ಕುಳಿತು ಮೃದುವಾಗಿ ಕೈಹಾಕಿ ಮಗಳನ್ನು ಲಾಲಿಸಿದಳು. ತಾಯಿಯ ಲಾಲನೆಗೆ ಒಮ್ಮೆಗೇ ಸ್ಫೋಟಿಸಿದಳು ಶ್ರಿಯಾ. ಭೋರೆಂದು ಅಳುತ್ತಿದ್ದ ಮಗಳನ್ನು ನೋಡಿ ಮಾಲತಿ ತತ್ತರಿಸಿದಳು.

'ಏನಾಯಿತು ತಾಯೀ?' ಮಗಳನ್ನು ಎದೆಗೆ ಅವಚಿಕೊಂಡಳು.

ತಾಯಿಯ ತೋಳಿನಮೇಲೆ ಮುಖವನ್ನಡಗಿಸಿ ಅಡಗಿಸಿಕೊಂಡಿರುವ ದುಃಖವನ್ನೆಲ್ಲಾ ತಾಯಿಗೆ ಹೇಳಿಕೊಂಡಳು.

'I was raped'

ಮಾಲತಿ ಸ್ಥಾಣುವಿನಂತೆ ಉಳಿದುಬಿಟ್ಟಳು.

ಬಿಕ್ಕಳಿಕೆಯ ನಡುವೆ, 'ಐ ಯಾಮ್ ಸಾರಿ ಮಾಮ್. ಜಾಗ್ರತೆಯಾಗಿರು ಎಂದು ನೀನು ಯಾವಾಗಲೂ ಹೇಳುತ್ತಲೇ ಇದ್ದರೂ, it was a regular party' ಮಗಳು ಅಪಾಲಜಿಟಿಕ್ ಆಗಿ ಹೇಳುತ್ತಿದ್ದರೆ, 'ನಿನ್ನ ಕುರಿತಾಗಿ ಗೊತ್ತಿಲ್ಲವೇ! ನೀನೇನು ತಪ್ಪು ಮಾಡಿರುವುದಿಲ್ಲ' ಎಂದು ತಾಯಿ ಹೇಳುತ್ತಿದ್ದರೆ ತನ್ನ ಮೇಲೆ ಅಮ್ಮ ಇಟ್ಟಿರುವ ನಂಬಿಕೆಗಾಗಿ ಮತ್ತಷ್ಟು ಗಿಲ್ಟೀ ಅನ್ನಿಸಿತು ಶ್ರಿಯಾಳಿಗೆ.

'ಏನಾದರೂ ತಿಂದಿಯಾ? ಜ್ಯೂಸ್ ತರಲೇ?' ಬೇಡವೆಂಬಂತೆ ತಲೆಯಾಡಿಸಿದಳು ಶ್ರಿಯಾ.

'ಸ್ವಲ್ಪ ಹಣ್ಣು ತಿನ್ನು. ಟೀ , ಬಿಸ್ಕೆಟ್ಸ್ ಕೂಡಾ ತರುತ್ತೇನೆ. ತಿಂದರೆ ಸ್ವಲ್ಪ ಶಕ್ತಿ ಬರುತ್ತದೆ'

ನೀರಸವಾಗಿ ಮಲಗಿರುವ ಶ್ರಿಯಾಳನ್ನು ನೋಡಿದರೆ ಎದೆ ಹಿಂಡಿದಂತಾಯಿತು ಮಾಲತಿಗೆ.

ತಾಯಿ ಪ್ರೀತಿಯಿಂದ ಮಾತನಾಡಿದ ಮೇಲೆ ಶ್ರಿಯಾಳಿಗೆ ಸ್ವಲ್ಪ ಹಸಿವು ತಿಳಿಯಿತು. ತಾಯಿಯ ಮಾತನ್ನು ಇಲ್ಲವೆಂದು ಹೇಳಲಾರದೇ ತಲೆಯಾಡಿಸಿದಳು.

ಟೀ ತರಲು ಕಿಚನ್‌ಗೆ ಬಂದಳು ಮಾಲತಿ. ಮಗಳ ಮುಂದೆ ಮಾಮೂಲಾಗಿಯೇ ನಡೆದುಕೊಂಡರೂ ಅಲ್ಲಿಗೆ ಬಂದಕೂಡಲೇ ಗಟ್ಟಿಯಾಗಿ ಕಿರುಚಿಕೊಳ್ಳಬೇಕೆನಿಸಿತು. ಕೌಂಟರ್ ಟಾಪನ್ನು ಊರಿನಿಂತು ಅತ್ತುಬಿಟ್ಟಳು. ಶಬ್ದ ಕೇಳಿಸಿದರೆ ಶ್ರಿಯಾಳಿಗೆ ತಿಳಿಯುವುದೆಂದು ಕಣ್ಣೊರೆಸಿಕೊಳ್ಳುತ್ತಲೇ ಟೀ ಮಾಡಿದಳು. ತಾನು ಕುಗ್ಗಿಹೋದರೆ ಶ್ರಿಯಾ ಇನ್ನಷ್ಟು ಕುಗ್ಗುತ್ತಾಳೆಂದು ಮನಸ್ಸನ್ನು ಗಟ್ಟಿಮಾಡಿಕೊಂಡಳು. ಅವಳಲ್ಲಿ ಬಗೆ ಬಗೆಯ ಯೋಚನೆಗಳು. ಈಗೇನು ಮಾಡಬೇಕು? ಅವಳಿನ್ನೂ 18 ವರ್ಷ ಕೂಡಾ ತುಂಬಿರದ ಹಸುಗೂಸು. ಸಂತೋಷವಾದರೆ ಕುಣಿಯುತ್ತಾಳೆ, ಜಿಗಿಯುತ್ತಾಳೆ. ಸ್ವಲ್ಪ ಎಮೋಷನಲ್ ಸಿನಿಮಾಗಳು ನೋಡಿದರೆ ಅತ್ತುಬಿಡುತ್ತಾಳೆ. ಶ್ರಿಯಾ ಮದುವೆ, ಮಕ್ಕಳವರೆಗೆ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿದವು ಮಾಲತಿಯ ಯೋಚನೆಗಳು.

ನೋವು, ಆತಂಕ ಮುಖದಲ್ಲಿ ಕಾಣಿಸದಂತೆ ಟ್ರೇಯಲ್ಲಿ ಟೀ, ಬಿಸ್ಕೆಟ್, ಫ್ರೂಟ್ಸ್ ಎಲ್ಲವೂ ತೆಗೆದುಕೊಂಡು ಬಂದಳು.

ಸ್ವಲ್ಪ ತಿನ್ನಲಿ ಎಂದು ಮಗಳನ್ನು ಮಾತಾಡಿಸದೇ ಹಾಗೆಯೇ ಬಿಟ್ಟಳು. ಬಿಸಿಬಿಸಿ ಟೀ ಕುಡಿಯುತ್ತಾ ನಿಧಾನವಾಗಿ ಗಂಟಲು ಬಿಚ್ಚಿದಳು ಶ್ರಿಯಾ.

* * *

'ಏಯ್ ಶ್ರೀ, ಸೆಮಿಸ್ಟರ್ ಇನ್ನೂ ಪೂರ್ತಿಯಾಗಲಿಲ್ಲ. ಆಗಲೇ ಬುಕ್ಸ್ ಅಗಿದು ನುಂಗುತ್ತಿರುವೆಯೇನು?' ರೂಮ್‌ಮೇಟ್ ಮಾರ್ಗರೆಟ್ ಸಲುಗೆಯಿಂದ ಬಂದು ಶ್ರಿಯಾಳ ಕೈಯಲ್ಲಿರುವ ಬುಕ್ ಎಳೆದಳು.